ಆ) 2003–04 ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ರೂ 3 00 ಲಕ್ಷ ಅನುದಾನ ಹಾಗೂ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರು ಕೂಲಿಗಾಗಿ ಕಾಳು ಯೋಜನೆಯಡಿ ಬಿಡುಗಡೆಗೊಳಿಸಿದ ರೂ 10 00 ಲಕ್ಷ ಹಣ ಸೇರಿ ಒಟ್ಟು ರೂ 13 00 ಲಕ್ಷ ಖರ್ಚಾಗಿದೆ

ಇ) ಪ್ರಸ್ತುತ ಈ ಯೋಜನೆಯನ್ನು ಜಿಲ್ಲಾ ಪಂಚಾಯತ್‌ಗೆ ವರ್ಗಾಯಿಸಿರುವುದರಿಂದ ಪೂರ್ತಿ ಮಾಡಲು ಅನುದಾನವನ್ನು ಸ್ಥಳೀಯವಾಗಿ ಕ್ರೋಢೀಕರಿಸಿ ಪೂರೈಸಬೇಕಾಗಬಹುದು

1536 (1808) ಶ್ರೀ ಸೋಮಣ್ಣ ವಿ (ಬಿನ್ನಿಪೇಟೆ) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ಯಾಟರಾಯನಪುರದ ಬಿ ಬಿ ಎಂ ಪಿ ವಲಯ ಕಛೇರಿಯನ್ನು ಸ್ಥಳಾಂತರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ,

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು,

ಇ) ಈಗಾಗಲೇ ಈ ವಲಯ ಕಛೇರಿಯನ್ನು ಸ್ಥಳಾಂತರಿಸಲು ಜನತೆಯಿಂದ ತೀವ್ರ ವಿರೋಧ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ, ಈ ಪ್ರಸ್ತಾವನೆಯನ್ನು ಸರ್ಕಾರ ಕೂಡಲೇ ಕೈಬಿಡುತ್ತದೆಯೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

1537 (1809) ಶ್ರೀ ಸೋಮಣ್ಣ ವಿ (ಬಿನ್ನಿಪೇಟೆ) – ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಪ್ರತಿ ದಿನ ಮಾರಾಟ ಮಾಡುತ್ತಿರುವ

25 ರೂ ದಿನದ ಬಸ್ ಪಾಸ್ ಸಂಖ್ಯೆ ಎಷ್ಟು,

ಆ) ಇದರಿಂದ ಪ್ರತಿದಿನ ಬರತಕ್ಕ ಅಂದಾಜು ವರಮಾನವೆಷ್ಟು,

ಇ) ಈ ದಿನದ ಪಾಸ್‌ಗಳನ್ನು ಮರುವಿತರಣೆ ಹಾಗೂ ಒಬ್ಬರಿಂದ ಮತ್ತೊಬ್ಬರಿಗೆ ನೀಡಿ ಸಾರಿಗೆ ಸಂಸ್ಥೆಗೆ ವಂಚನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) 1 91 ಲಕ್ಷ ಪಾಸುಗಳು

ಆ) ಪ್ರತಿ ದಿನ ಅಂದಾಜು ರೂ 47 75 ಲಕ್ಷಗಳು

ಇ) ಹೌದು

ಈ) ಪಾಸುಗಳ ದುರುಪಯೋಗದ ಬಗ್ಗೆ ದೂರುಗಳು ಬಂದ ಕೂಡಲೇ ಇದನ್ನು ತಡೆಯಲು ಈ ಕೆಳಕಾಣಿಸಿರುವ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ

1) ಪ್ರಯಾಣಿಕರು ಪಾಸುಗಳನ್ನು ಖರೀದಿಸಿದ ಕೂಡಲೇ ಅದರಲ್ಲಿ ಕಡ್ಡಾಯವಾಗಿ ಸಹಿ ಮಾಡಿ ಅವರ ವಯಸ್ಸನ್ನು ನಮೂದಿಸಬೇಕು

2) ಪ್ರಯಾಣಿಕರು ಅವರ ಲಿಂಗವನ್ನು ಗುರುತು ಹಾಕಬೇಕು

3) ಈ ದುರುಪಯೋಗವನ್ನು ಪತ್ತೆಹಚ್ಚಲು ಬಿ ಎಂ ಟಿ ಸಿ ಯಿಂದ ಖಾಯಂ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದೆ

1538 (1810) ಶ್ರೀ ವಿ ಸೋಮಣ್ಣ (ಬಿನ್ನಿಪೇಟೆ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ ಎಂ ಆರ್ ಡಿ ಎ ಬೃಹತ್ ಬೆಂಗಳೂರು ಮಹಾನಗರಕ್ಕೆ ಸಂಬಂಧಪಟ್ಟಂತೆ ಕರಡು ಮಾಸ್ಟರ್ ಪ್ಲಾನ್ ಇಲ್ಲಿಯವರೆಗೆ ಪ್ರಕಟಿಸದೇ ಇರಲು ಕಾರಣಗಳೇನು,

ಆ) ಇದರಿಂದ ನಿರ್ಮಾಣ ಕಾರ್ಯ ಸ್ಥಗಿತ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,